# ಬುಟ್ಟಿಯಾಕಾರದ ಬಾವಿ

ಮುಂಡ್ಕೂರು ಗ್ರಾಮದ ಜಾರಿಗೆಕಟ್ಟೆಯಲ್ಲಿರುವ ಹೆಸರಾಂತ ಕೊರಗ ಪಂಜುರ್ಲಿ ಕ್ಷೇತ್ರದಲ್ಲಿ ಕೇರಳದ ಕಣ್ಣೂರಿನ ಶಿಲ್ಪಿಗಳು ಸಿಮೆಂಟಿನಲ್ಲಿ ರೂಪಿಸಿರುವ ಬುಟ್ಟಿ ವಿನ್ಯಾಸದ ಈ ಬಾವಿ ಜನಮನ ಸೂರೆಗೊಳ್ಳುತ್ತಿದೆ. ಈ ಆಕರ್ಷಕ ಬಾವಿ ನಿರ್ಮಾಣಕ್ಕೆ ಅಂದಾಜು 2 ಲಕ್ಷ ರೂಪಾಯಿ ವೆಚ್ಚವಾಗಿದೆ ಎನ್ನುತ್ತಾರೆ ಕ್ಷೇತ್ರದ ದೈವ ಪಾತ್ರಿಗಳಾದ ದಿವಾಕರ ಪೂಜಾರಿ.

**-ಪಿ.ಜಯವಂತ ಪೈ, ಕುಂದಾಪುರ**





# ಐತಿಹಾಸಿಕ ನಾಣ್ಯ ಸ್ತಂಭ

ಆಧುನಿಕ ಮಣಿಪಾಲ ನಿರ್ಮಾಣದ ಹಿಂದಿನ ಶ್ರಮದಾತರು ತೋನ್ಸೆ ಪೈ ಮನೆತನದವರು. ಅವರಲ್ಲಿ ತೆರೆಯ ಮರೆಯಲ್ಲಿ ಕಾರ್ಯ ನಿರ್ವಹಿಸಿದವರಲ್ಲಿ ತೋನ್ಸೆ ಉಪೇಂದ್ರ ಪೈ ಪ್ರಮುಖರು. ಅವರ ಸ್ಮರಣಾರ್ಥ ಮಣಿಪಾಲ ರಜತಾದ್ರಿ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ಸ್ಮಾರಕ ವೃತ್ತ ನಿರ್ಮಿಸಲಾಗಿದ್ದು, ನಾಣ್ಯಗಳ ಮೂಲಕ ಇತಿಹಾಸ ನೆನಪಿಸುವ ವಿನೂತನ ನಾಣ್ಯ ಸ್ತಂಭ ಕಲಾಕೃತಿಯನ್ನು ನಿರ್ಮಾಣ ಮಾಡಲಾಗಿದೆ. ಈ ನಾಣ್ಯ ಸ್ತಂಭವು 27 ಅಡಿ ಎತ್ತರವಿದ್ದು, ಏಳು ವಿವಿಧ ಕಾಲಘಟ್ಟದ ನಾಣ್ಯಗಳ ಮಾದರಿಯ ಕಲಾಕೃತಿಗಳನ್ನು ಒಂದರ ಮೇಲೊಂದು ಜೋಡಿಸಲಾಗಿದೆ.

ರಾಜಸ್ಥಾನದ ಸ್ಯಾಂಡ್ ಸ್ಟೋನ್, ತಮಿಳುನಾಡಿನ ಮಹಾಬಲಿಪುರಂ ಶಿಲೆ, ಯೆರ್ಕಾಡ್ ಬ್ಲೂ ಸ್ಟೋನ್, ಟರ್ಕಿ ಮಾರ್ಬಲ್, ಕಾರ್ಕಳದ ಶಿಲೆ, ಕಪ್ಪು ಶಿಲೆ ಬಳಸಿಕೊಂಡು ಮೂಲ ನಾಣ್ಯಗಳ ತದ್ರೂಪದಂತೆ ಕಲಾಕೃತಿ ರಚಿತವಾಗಿದೆ. ಸಪ್ತ ನಾಣ್ಯಗಳನ್ನು ಒಂದರ ಮೇಲೊಂದು ನಾಜೂಕಿನಿಂದ ಜೋಡಿಸಲಾಗಿದೆ. ಮೇಲಿನಿಂದ ರಂಧ್ರ ನಾಣ್ಯ, ಆಳುಪರ ಕಾಲದ ನಾಣ್ಯ, ಆಳುಪರ ಲಾಂಛನ, ಒಂದು ರೂಪಾಯಿ ದೊಡ್ಡ ನಾಣ್ಯ, ವಿಜಯನಗರದ ಕಾಲದಲ್ಲಿ ಬಳಕೆ ಮಾಡಿದ ಕನ್ನಡ ಅಕ್ಷರ, ಹಾಗೂ ತುಳು ನಾಡಿನ ಸಂಸ್ಕೃತಿಯನ್ನು ನಾಣ್ಯಗಳಲ್ಲಿ ಬಿಂಬಿಸಲಾಗಿದೆ. ಶಾಲಾ ವಿದ್ಯಾರ್ಥಿಗಳಿಗೆ, ಅಧ್ಯಯನಶೀಲರಿಗೆ ಈ ವೃತ್ತವು ಇತಿಹಾಸವನ್ನು ಬೋಧಿಸುತ್ತಿದೆ.

**-ತಾರಾನಾಥ್ ಮೇಸ್ತ, ಉಡುಪಿ**

# ಮನಮೋಹಕ ಕಾರ್ಟೂನ್ ಶಿಲ್ಪಗಳು

ಉತ್ತರ ಕನ್ನಡ ಜಿಲ್ಲೆ ದಾಂಡೇಲಿಯಲ್ಲಿ ಒಂದು ವಿಶಿಷ್ಟ ಕಾರ್ಟೂನ್ ಪಾರ್ಕ್ ಜನ್ಮತಾಳಿದೆ. ಪ್ರತಿದಿನ ಮಕ್ಕಳು ಟಿ.ವಿ. ಪರದೆಯ ಮುಂದೆ ಕಾರ್ಟೂನ್ ಚಿತ್ರಗಳನ್ನು ವೀಕ್ಷಿಸುತ್ತಾ ಇರುವುದು ಸರ್ವೇ ಸಾಮಾನ್ಯ. ಆದರೆ ಅದೇ ತದ್ರೂಪಿ ಹೊಂದಿರುವ ಸುಮಾರು 106 ಕಾರ್ಟೂನ್ ಶಿಲ್ಪಗಳು ಇರುವುದು ವಿಶೇಷ. ದಾಂಡೇಲಿ ಅರಣ್ಯ ಇಲಾಖೆಯವರು ದಂಡಕಾರಣ್ಯ ಪ್ರದೇಶದಲ್ಲಿರುವ ಒಂದೇ ಒಂದು ಮರವನ್ನು ಕಡಿಯದೇ ಪಾರ್ಕ್ ರಚಿಸಿರುವುದು ವಿಶೇಷ.

**-ಬಳಕೂರು ವಿ.ಎಸ್.ನಾಯಕ, ಬೆಂಗಳೂರು**

